ಆಯವ್ಯಯದಲ್ಲಿ ಯೋಜನಾ ವೆಚ್ಚ ವಿವರ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 19 (312)

ಶ್ರೀ ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ):

ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) 2011–12ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ವೆಚ್ಚದಲ್ಲಿ ಎಷ್ಟು ಹಣ ಒದಗಿಸಲಾಗಿದೆ; ಅದರಲ್ಲಿ ವೆಚ್ಚವಾದ ಹಣವೆಷ್ಟು; (ಇಲಾಖಾವಾರು ವಿವರ ಒದಗಿಸುವುದು);

ಆ) ಮಾರ್ಚ್ 2012 ರ ಅಂತ್ಯಕ್ಕೆ ಬಿಡುಗಡೆ ಹಾಗೂ ವೆಚ್ಚ ಮಾಡಿದ ಹಣವೆಷ್ಟು (ಇಲಾಖಾವಾರು ಮತ್ತು ಲೆಕ್ಕ ಶೀರ್ಷಿಕೆವಾರು ಮಾಹಿತಿ ಒದಗಿಸುವುದು);

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) 2011–12ನೇ ಸಾಲಿನ ಆಯವ್ಯಯದಲ್ಲಿ ಯೋಜನೆಯಡಿ ಒದಗಿಸಿದ ಹಣ ಹಾಗೂ 2011–12ನೇ ಸಾಲಿನಲ್ಲಿ ಆಗಿರುವ ಪೂರ್ವವಾಸ್ತವಿಕ ಖರ್ಚಿನ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮೊದಲೆರಡು ತ್ರೈಮಾಸಿಕ ಅವಧಿಗೆ ಆರ್ಥಿಕ ಪ್ರತ್ಯಾಯೋಜನೆ ಮೂಲಕ ಸರ್ಕಾರದ ವಿವಿಧ ಇಲಾಖೆಗಳು ಅನುದಾನ ಬಿಡುಗಡೆ ಆದೇಶ ಹೊರಡಿಸುತ್ತೇವೆ. ಪೂರ್ಣ ವರ್ಷದಲ್ಲಿ ಬಿಡುಗಡೆಯಾದ ಹಣ ಒಂದೇ ಇಲಾಖೆಯಲ್ಲಿ ಕ್ರೋಡೀಕೃತವಾಗುತ್ತಿಲ್ಲ. ಆದುದರಿಂದ ಪ್ರತಿ ಇಲಾಖೆಗೆ ಬಿಡುಗಡೆಯಾಗಿರುವ ಹಣದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

D.No. ಅಭಿಯಾಚನೆ ಸಂಖ್ಯೆ	Demand Description ಅಭಿಯಾಚನೆ ಶೀರ್ಷಿಕೆ	BE/.ಆಯವ್ಯಯ ಅಂದಾಜು 2011-12 Plan/ಯೋಜನೆ	Expenditure/ವೆಚ್ಚ 2011-12 Pre Actulas/ ಪೂರ್ವ ವಾಸ್ತವಿಕ) Plan/ಯೋಜನೆ
1	Agriculture and Horticulture / ಕೃಷಿ ಮತ್ತು ತೋಟಗಾರಿಕೆ ಇಲಾಖೆ	262752.45	182993.85
2	Animal Husbandry and Fisheries / ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	81307.16	79612.48
3	Finance / ಹಣಕಾಸು ಇಲಾಖೆ	1800.00	17837.48
4	Department of Personnel & Administrative Reforms / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	8038.00	5708.90
5	Home & Transport / ಒಳಾಡಳಿತ ಮತ್ತು ಸಾರಿಗೆ ಇಲಾಖೆ	37832.15	33745.69

6	Infrastructure Development / ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಇಲಾಖೆ	49415.00	17352:70
7	Rural Development & Panchayath Raj / ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	304548.44	408134.79
8	Forest, Ecology & Environment / ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ	20711.87	26689.36
9	Co-operation / ಸಹಕಾರ ಇಲಾಖೆ	43331.54	58501.19
10	Social Welfare / ಸಮಾಜ ಕಲ್ಯಾಣ ಇಲಾಖೆ	271297.95	261741.11
11	Women & Child Development / ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	168653.17	187614.88
12	Information, Tourism & Youth Services / ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ	36725.50	40140.50

13	Food & Civil Supplies / ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ	300.00	1034.46
14	Revenue / ಕಂದಾಯ ಇಲಾಖೆ	65117.00	95604.24
15	Information Technology / ಮಾಹಿತಿ ತಂತ್ರಜ್ಞಾನ ಇಲಾಖೆ	9160.00	7516.50
16	Housing / ವಸತಿ ಇಲಾಖೆ	106757.81	101624.18
17	Education / ಶಿಕ್ಷಣ ಇಲಾಖೆ	305079.53	304621.26
18	Commerce & Industries / ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	67443.90	71998.02
19	Urban Development / ನಗರಾಭಿವೃದ್ಧಿ ಇಲಾಖೆ	395989.55	364603.67
20	Public Works / ಲೋಕೋಪಯೋಗಿ ಇಲಾಖೆ	250189.60	363099.84
21	Water Resources / ಜಲಸಂಪನ್ಮೂಲ ಇಲಾಖೆ	598845.89	529523.56

22	Health & Family Welfare / ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	161693.13	155221.37
23	Labour / ಕಾರ್ಮಿಕ ಇಲಾಖೆ	40047.62	21953.00
24	Energy / ಇಂಧನ ಇಲಾಖೆ	95120.00	111964.35
25	Kannada & Culture / ಕನ್ನಡ ಮತ್ತು ಸಂಸ್ಕೃತಿ ಇಲಾಖೆ	21312.61	15378.48
26	Planning, Statistics & Science Technology / ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	57853.18	52796.28
27	Law / ಕಾನೂನು ಇಲಾಖೆ	3125.00	3486.73
28	Parliamentary Affairs & Legislation / ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ	0.00	0.00
29	Debt Servicing / ಋಣ ಮೇಲುಸ್ತುವಾರಿ	0.00	0.00
	Total / ಒಟ್ಟು	**3464448.05**	**3520500.00**

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ಸಿಕ್ಕಿದೆ. ಉತ್ತರ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಈ ಉತ್ತರದಲ್ಲಿ ನ್ಯೂನತೆ ಏನಿದೆ ಎಂದರೆ. ಅಂದರೆ 2011–12ರಲ್ಲಿ ನಮ್ಮ plan outlay ಏನಿತ್ತು ಎಂಬ ವಿವರ ಇಲ್ಲ. ನನ್ನ ಪ್ರಶ್ನೆ ಏನಿತ್ತೆಂದರೆ ವಿವಿಧ ಇಲಾಖೆಗಳಲ್ಲಿ ನಮ್ಮ ಯೋಜನಾ ವೆಚ್ಚ ಎಷ್ಟಿದೆ? ಮತ್ತು ಎಷ್ಟು ಹಣ ಖರ್ಚಾಗಿದೆ? ಈ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಿದ್ದಾರೆ. ಈ ಉತ್ತರದಲ್ಲಿ ನನಗೆ ದೊಡ್ಡ ಅನುಮಾನವಿದೆ. ಏನೆಂದರೆ 34,64,448 ರೂ.ಗಳ ನಮ್ಮ plan out-lay ಇದೆ. ಆದರೆ, ಅದರಲ್ಲಿ 35,20,500 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತೋರಿಸಿದ್ದಾರೆ. ಅಂದರೆ ಸುಮಾರು 1600, 1700 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಿದ್ದೇವೆಂದು ತೋರಿಸಿದ್ದಾರೆ. ಇದೇ ಮಾರ್ಚ್‌ನಲ್ಲಿ ನಡೆದ ಸದನದಲ್ಲಿ ನಾವು ಪ್ರಶ್ನೆ ಕೇಳಿದ್ದೆವು. ಆಗ ವೆಚ್ಚವಾಗಿರುವುದು by the end of February, 20,000 ಕೋಟಿ ರೂಪಾಯಿ ಎಂದು ತೋರಿಸಿದ್ದೀರಿ. ಮಾರ್ಚ್ ಒಂದೇ ತಿಂಗಳಿನಲ್ಲಿ 15,000 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಖರ್ಚು ಮಾಡಿದ್ದೀರೆಂದರೆ ಯಾವ ರೀತಿ ಖರ್ಚಾಗಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹಿಂದೆ ಗ್ರಾಮೀಣಾಭವೃದ್ಧಿ ಸಚಿವರಾಗಿದ್ದರು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು, ಉತ್ತರ ಹೇಳಲಿ, ಆಮೇಲೆ ಪ್ರಶ್ನೆ ಕೇಳಿ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ : ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚು ವೆಚ್ಚ ಎಂದು ತೋರಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶರಣಪ್ರಕಾಶ ರುದ್ರಪ್ಪ ಪಾಟೀಲ್‌ರವರು ಹಣಕಾಸು ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದಾರೆ. Budget under plan expenditure ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇವೆ. ಈಗ ಅವರು total plan outlay ನಲ್ಲಿ 34,64,448 ರೂಪಾಯಿಗಳಲ್ಲಿ ಖರ್ಚಾಗಿದ್ದು 35,20,500 ರೂ.ಗಳು ಎಂದು ಪ್ರಸ್ತಾಪ ಮಾಡಿದರು. ಎಲ್ಲಿ ಖರ್ಚಾಯಿತು ಎಂದು ನಾವು ಹೇಳಿದ್ದೇವೆ.

ಮಾರ್ಚ್‌ನಲ್ಲಿ ಕೊಟ್ಟಿರುವ figure ಬೇರೆ ಎಂದು ಹೇಳಿದಿರಿ. ಅಧಿಕೃತವಾಗಿ ಸದನದಲ್ಲಿ ನಿಮಗೆ ಕೊಡುತ್ತಿದ್ದೇವೆ. ಅಧಿಕೃತವಾಗಿ ಸದನದಲ್ಲಿ ಮಾಹಿತಿ ಕೊಡುವ ಸಂದರ್ಭದಲ್ಲಿ ತಪ್ಪು ಮಾಹಿತಿ ಕೊಡುವ ಪ್ರಶ್ನೆ ಇಲ್ಲ. ಕೆಲವು ಇಲಾಖೆಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದೀರಿ. Public Works Department ನೋಡಿದರೆ ಅಲ್ಲಿ ಹೆಚ್ಚು ಹಣ ಖರ್ಚಾಗಿದೆ. ಹೀಗಾಗಿ ಆ ರೀತಿಯಿಂದ ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚಾಗಿದೆ ಎಂದು ನಾನು ಹೇಳಬಯಸುತ್ತೇನೆ. Account System ಏನಿದೆ, ಅವೆಲ್ಲವನ್ನೂ verify ಮಾಡಿಯೇ ಇಲ್ಲಿ ಕೊಟ್ಟಿರುತ್ತೇವೆ. ಆ ದೃಷ್ಟಿಯಿಂದ ಈ figure ಕೊಟ್ಟಿದ್ದೇನೆ ಅದು ಸರಿ ಇದೆ. ಇದರಲ್ಲಿ ಯಾವುದೂ ತಪ್ಪು ಮಾಹಿತಿ ಎನ್ನುವಂಥದ್ದು ಇಲ್ಲ.

ಡಾ। ಶರಣಪ್ರಕಾಶ ರುದ್ರಪ್ಪ ಪಾಟೀಲ್ : ನಿಮ್ಮ ಲೆಕ್ಕದ ಪ್ರಕಾರ ಒಂದೇ ತಿಂಗಳಲ್ಲಿ ಅಂದರೆ only in the month of March, 15 ಸಾವಿರ ಕೋಟಿ ರೂಪಾಯಿ ಖರ್ಚಾಗಿದೆ. ಕಳೆದ ಅಧಿವೇಶನದಲ್ಲಿ ನಾವು ಪ್ರಶ್ನೆ ಕೇಳಿದ್ದವು. ಅದಕ್ಕೆ 20 ಸಾವಿರ ಕೋಟಿ ರೂಪಾಯಿಗಳನ್ನು February end ನಲ್ಲಿ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಈಗ ಒಂದೇ ತಿಂಗಳಲ್ಲಿ 15 ಸಾವಿರ ಕೋಟಿ ರೂಪಾಯಿ ಖರ್ಚಾಗಿದೆಯೇ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು explain ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಅವರ ಹತ್ತಿರ ಏನು ಮಾಹಿತಿ ಇದೆ ಅದನ್ನು ನನ್ನ ಕಡೆ ಕೊಡಲಿ. I will veify it.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಇದು ನೀವೇ ಕೊಟ್ಟಿರುವ ಮಾಹಿತಿ.

ಶ್ರೀ ಜಗದೀಶ್ ಶೆಟ್ಟರ್ : These are all based on the figures. ಈಗ ಅವರು 15 ಸಾವಿರ ಕೋಟಿ ರೂಪಾಯಿ ಏಕೆ ಜಾಸ್ತಿಯಾಯಿತು ಎಂದು ಹೇಳುತ್ತಿದ್ದಾರೆ. ಇವತ್ತು Latest Figure ಏನಿದೆ ಅದನ್ನು ನಾನು ಕೊಟ್ಟಿದ್ದೇನೆ. ಅದರಲ್ಲಿ ಹೆಚ್ಚು ಕಡಿಮೆ ಇದ್ದರೆ ಅವರು ನನ್ನ ಹತ್ತಿರ discussion ಮಾಡಲಿ. I am ready to discuss.

ಅಧ್ಯಕ್ಷರು : ಚರ್ಚೆ ಮಾಡುತ್ತಾರೆ.

SRI SIDDARAMAIAH : He is asking a particular question

ಅಧ್ಯಕ್ಷರು : ಆಯಿತು, ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಜನವರಿ endಗೆ ನೀವು ಕೊಟ್ಟಿರುವಂಥ ಅಂಕಿ-ಅಂಶಗಳಿಗೂ ಮಾರ್ಚ್ ಮುಗಿದು ಮೇಲೆ ಕೊಟ್ಟಿರುವ ಅಂಕಿಅಂಶಗಳಿಗೂ ತಾಳಮೇಳ ಇಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕಿದ್ದ ಹಾಗೆ ಎರಡೇ ತಿಂಗಳಲ್ಲಿ 15-20 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಲ್ಲಾ ಹೇಗೆ ಮಾಡಿದಿರಿ ? ಲೆಕ್ಕ ಕೊಡುತ್ತೀರಾ ಎಂದು ಅವರು ಕೇಳುತ್ತಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ನನಗೆ ಕಳುಹಿಸಿಕೊಡಿ ನೋಡುತ್ತೇವೆಂದು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಲೆಕ್ಕ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅವರು ಕೇಳಿರುವ ಎರಡನೇ ಪ್ರಶ್ನೆ ಏನಿದೆ ಎನ್ನುವುದನ್ನು ಹೇಳಿ, ನೋಡೋಣ, ನೀವು ಅದಕ್ಕೆ ಏನು ಉತ್ತರ ಹೇಳಿದ್ದೀರಿ, ನೋಡಿ, ಉತ್ತರಕ್ಕೂ ಪ್ರಶ್ನೆಗೂ ಸಂಬಂಧವಿಲ್ಲ. ಆ ತರಹ ಹೇಳಿದ್ದೀರಿ. ಮಾರ್ಚ್ 2012 ರ ಅಂತ್ಯಕ್ಕೆ ಬಿಡುಗಡೆ ಎಂದು ಕೇಳಿದ್ದಾರೆ. There are three things. Allocation, release and expenditure. Allocation in the plan, release by the Finance Department, expenditure by the Department ಈ ಮೂರು ಹೇಳಬೇಕು. ಎಷ್ಟು allocation ಇತ್ತು ? ಎಷ್ಟು release ಆಯಿತು ? March end ವರೆಗೆ ಎಷ್ಟು ಹಣ ಖರ್ಚಾಯಿತು ?

ಶ್ರೀ ಜಗದೀಶ್ ಶೆಟ್ಟರ್ : 8000 ದಿಂದ 10000 ಕೋಟಿ ರೂಪಾಯಿ every year March ತಿಂಗಳಲ್ಲಿ release ಇರುತ್ತದೆ. The Government has taken steps to ensure that expenditure is more evenly spread. ಈ ವರ್ಷ ನಾವು ಇಲಾಖೆಗೇ ಖರ್ಚು ಮಾಡಲಿಕ್ಕೆ authorization ಕೊಟ್ಟಿದ್ದೇವೆ. 6 ತಿಂಗಳವರೆಗೆ ಇಲಾಖೆಗೇ ಖರ್ಚು ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇವೆ. ಅಲ್ಲಿಂದ ಅವರು amount

release ಮಾಡುತ್ತಾರೆ. ಆ ದೃಷ್ಟಿಯಿಂದ ನಾವು ಮಾಹಿತಿ ಕೊಟ್ಟಿದ್ದೇವೆ. ಅದು ಸರಿಯಾದ ಮಾಹಿತಿ ಇದೆ.

ಅಧ್ಯಕ್ಷರು : ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಸಿದ್ದರಾಮಯ್ಯ : ಪ್ರತಿ ವರ್ಷದ ಕೊನೆಯಲ್ಲಿ ಮಾರ್ಚ್ ತಿಂಗಳ 20–25ನೇ ತಾರೀಖು treasury ಯನ್ನು lock ಮಾಡುತ್ತಾರೆ. ಆಮೇಲೆ ಉಳಿದ ಹಣವನ್ನು ಹೇಗೆ ಖರ್ಚು ಮಾಡಿರುತ್ತಾರೆ ? ಎಲ್ಲರೂ PD Account ನಲ್ಲಿ ಇಟ್ಟುಕೊಳ್ಳುವುದಕ್ಕೆ ಕೊಟ್ಟಿರುತ್ತೀರಾ ? ಆ ವರ್ಷದ Plan ನಲ್ಲಿ 34 ಸಾವಿರ ಚಿಲ್ಲರೆ ಕೋಟಿ ರೂ. ಇತ್ತೆಂದು ಹೇಳುತ್ತಾರೆ. ಆ 34 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಲ್ಲಿ how much money is released to the Departments and how much money released is spent by each Department ? ಎನ್ನವುದು ಬೇಕು. ಅದು ಕೊಡದೆ ಆಮೇಲೆ 6 ತಿಂಗಳವರೆಗೆ ಅವರು ಖರ್ಚು ಮಾಡುತ್ತಿರುತ್ತಾರೆ. ಆಮೇಲೆ ಲೆಕ್ಕ ಬರುತ್ತದೆ ಎಂದು ಹೇಳಿದರೆ ಹೇಗೆ? ಕಳೆದ ವರ್ಷದ್ದನ್ನು ಈ 6 ತಿಂಗಳವರೆಗೆ ಖರ್ಚು ಮಾಡುತ್ತಾರೆಯೇ? ಹಾಗಾದರೆ ನಾವು ಮಾರ್ಚ್‌ನಲ್ಲಿ approve ಮಾಡಿಕೊಟ್ಟು 1ನೇ ತಾರೀಖಿನಿಂದ ಖರ್ಚು ಮಾಡಿದ್ದು ಯಾವ ಲೆಕ್ಕೆ? ಮಾರ್ಚ್‌ನಲ್ಲಿ ನಾವು Finance Bill ಅನ್ನು ಅಂದರೆ 4 ತಿಂಗಳಿಗೆ ಬಜೆಟ್ ಅನ್ನು approve ಮಾಡಿಕೊಟ್ಟಿವಲ್ಲಾ, ಅದು ಯಾವ ಹಣ? ಇವರು ಖರ್ಚು ಮಾಡಿರುವುದು ಯಾವ ಹಣ? Allocation, release, expenditure ಬಗ್ಗೆ ಹೇಳಬೇಕು.

ಡಾ। ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ನಾನು 8 ವರ್ಷಗಳಿಂದ ಈ ಸದನದಲ್ಲಿದ್ದು ಪ್ರತಿ ವರ್ಷ ನೋಡುತ್ತಿದ್ದೇನೆ. ನೀವು quarterly releases ಅನ್ನು ಸರಿಯಾಗಿ ಮಾಡುತ್ತಿಲ್ಲ. First, second quarterನಲ್ಲಿ ಹಣ ಸರಿಯಾಗಿ ಬಿಡುಗಡೆಯಾಗುವುದಿಲ್ಲ. Third quarterನಲ್ಲಿ ಸರಿಯಾಗಿ ಬಿಡುಗಡೆಯಾಗುವುದಿಲ್ಲ. Fourth quarter ನಲ್ಲಿ ಒಂದೇ ಸಲಕ್ಕೆ ಹಣ ಬಿಡುಗಡೆ ಮಾಡುತ್ತೀರಿ, expenditure ಎಂದು ತೋರಿಸುತ್ತೀರಿ, ಇದರಿಂದ ಅವ್ಯವಹಾರಕ್ಕೆ ಕಾರಣವಾಗುತ್ತದೆ. ಅದಕ್ಕೆ ನೀವು ಸರಿಯಾಗಿ ಹಣ ಹೊಂದಾಣಿಕೆ ಮಾಡಿ, every quarterನಲ್ಲಿ release ಮಾಡಿ,

progress review ಮಾಡಿ ಸರಿಯಾಗಿ ಮಾಡಿ. ಏಕೆಂದರೆ, ಇದು plan outlay, ರಾಜ್ಯದ ಅಭಿವೃದ್ಧಿ ವಿಷಯ. ಆದ್ದರಿಂದ, ಇದನ್ನು ಸರಿಯಾಗಿ ನಿರ್ವಹಣೆ ಮಾಡಬೇಕೆಂಬ ಉದ್ದೇಶದಿಂದ ಕೇಳುತ್ತಿದ್ದೇನೆ. ಆದರೆ, ಇದು ಆಗುತ್ತಿಲ್ಲ. ಪ್ರತಿ ವರ್ಷ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ. ಆದರೆ ಸರ್ಕಾರ ಸರಿಪಡಿಸಿಕೊಳ್ಳುತ್ತಿಲ್ಲ. Last quarter ನಲ್ಲಿ ಒಂದು ತಿಂಗಳಲ್ಲಿ ಎರಡು ತಿಂಗಳಲ್ಲಿ 15 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಮಾನ್ಯ ಮುಖ್ಯಮಂತ್ರಿಯವರೆ ಮಾರ್ಚ್ ಒಂದೇ ತಿಂಗಳಲ್ಲಿ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವೇ? This is not right.

ಶ್ರೀ ವೈ.ಎನ್. ರುದ್ರೇಶ್ ಗೌಡ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ರುದ್ರೇಶ್‌ಗೌಡರೆ, ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಮಧ್ಯೆ ಎದ್ದು ಕೇಳುತ್ತೀರಲ್ಲಾ? No ತಾವು ಕುಳಿತುಕೊಳ್ಳಿ ಅನುಮತಿ ಕೇಳದೆ ಎದ್ದು ನಿಂತು ಕೇಳುತ್ತಿರಲ್ಲಾ ? How it is possible? ಇದು ಹೇಗೆ? ಅವರು ಮಾತೇ ಮುಗಿಸಿಲ್ಲ. ನೀವು ಎದ್ದು ಮಧ್ಯೆ ಮಾತನಾಡುತ್ತೀರಿ.

DR. SHARANA PRAKASH RUDRAPPA PATIL: I want a categorical reply and assurance from the finance and Chief Minister. That will not happen in future ಎಂದು he should assure me on the floor of the House.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಏನು ಹೇಳಿದ್ದಾರೆ. ಏನು ಹೇಳಿದ್ದಾರೆ, ಈಗ ಇರುವಂಥ ಮಾಹಿತಿ ಕೊಟ್ಟಿದ್ದೇವೆ ಮತ್ತು ಈ ಮಾರ್ಚ್ ತಿಂಗಳಲ್ಲಿ ಅವರು ಹೇಳಿದ ಹಾಗೆ 8 ರಿಂದ 10 ಸಾವಿರ ಕೋಟಿ release ಮಾಡುವಂಥದ್ದಾಗಿದೆ. Quarterly release ಮಾಡಬೇಕೆಂದು ಏನು ಹೇಳಿದರು ಆ system ಅನ್ನು ನಾವು ತರುತ್ತಿದ್ದೇವೆ. 6 ತಿಂಗಳುವರೆಗೆ release ಮಾಡುವಂಥದ್ದಕ್ಕೆ ಇಲಾಖಾವಾರು ಕೊಟ್ಟುಬಿಟ್ಟಿದ್ದೇವೆ. Quarterly ಸಹಿತ ನಾವು amount

release ಮಾಡುತ್ತೇವೆ. ಆ ದೃಷ್ಟಿಯಿಂದ figurers ಕೊಟ್ಟಿದ್ದೇವೆ. ಇನ್ನು ಏನು ಮಾಹಿತಿ ಕೊಡಬೇಕೋ ಅದನ್ನು ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ.

ಡಾ। ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾಹಿತಿ ಅಲ್ಲ, ಈ ರೀತಿ ಮಾಡುವುದಕ್ಕೆ ಸರಿ ಹೋಗದಿದ್ದರೆ ನಾವು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಅಧ್ಯಕ್ಷರು : ಮಾಹಿತಿ ಕೊಡುತ್ತೇವೆಂದು ಹೇಳಿದ್ದೀರಲ್ಲ ಬಿಡಿ. ಡಾ। ಮಾಲಕರೆಡ್ಡಿರವರ ಪ್ರಶ್ನೆಗೆ time ಕೇಳಿದ್ದಾರೆ 26ಕ್ಕೆ ಉತ್ತರ ಕೊಡಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನಾನು ತಮ್ಮನ್ನು ಕೇಳುತ್ತೇನೆ ಅವರ ಪ್ರಶ್ನೆ ಎಷ್ಟು ಪ್ರಮುಖವಾದದು ಎಂದು ತಮಗೆ ಅರ್ಥವಾಗಿದೆ. ಅದಕ್ಕೆ ಉತ್ತರ ಕೊಡುವುದಕ್ಕೆ time ಬೇಕೆಂದು ಕೇಳುತ್ತಾರೆಂದರೆ ಏನರ್ಥ ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಜಯಚಂದ್ರರವರೆ, ಸ್ವಲ್ಪ ಇಲ್ಲಿ ಕೇಳಿ. ಪ್ರಶ್ನೆ ಸರಳನೋ, ಕ್ಲಿಷ್ಟನೋ, ಕಠಿಣನೋ, ಸಿಂಪಲ್ಲೋ ಎನ್ನುವ ಪ್ರಶ್ನೆಯಲ್ಲ. ಇವರು ಕೇಳಿರುವುದು ಯಾದಗಿರಿ ಜಿಲ್ಲಾ ಕೇಂದ್ರದಲ್ಲಿರುವ ಸಾರ್ವಜನಿಕ ಕಟ್ಟಡಗಳು ನಿರ್ಮಾಣವಾಗದಿರುವ ಬಗ್ಗೆ. ಅದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರಿಸಬೇಕು. ನಾನು ಆಗಲೇ ಸಭೆಯ ಗಮನಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ಕೊಟ್ಟಿದ್ದೇನೆ. ಇದೇ ಸಮಯದಲ್ಲಿ ಸುಮಾರು 11 ಪ್ರಶ್ನೆಗಳು Council ನಲ್ಲಿ ಬಂದಿರುವುದರಿಂದ ಈ ಎಲ್ಲಾ ಪ್ರಶ್ನೆಗಳನ್ನು ದಯವಿಟ್ಟು ನಾಳೆ ಅಥವಾ ಸೋಮವಾರ ಹಾಕಿಕೊಳ್ಳಿ ಎಂದು ಹೇಳಿದ್ದೇವೆ. ನಾವು ಹಾಕಿಕೊಳ್ಳುತ್ತೇವೆ. ಈಗ simple answer deny ಮಾಡುತ್ತೇವೆಂದಲ್ಲ. ಸಚಿವರು ಇಲ್ಲಿ ಬರಬೇಕು ಅವರು ಬಂದ ಮೇಲೆ ನಾಳೆ ಉತ್ತರ ಕೊಡಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : Parliamentary Affairs Ministers ಗೆ ಸಾಕಷ್ಟು ಅನುಭವವಾಗಿದೆ. ಅವರು ಬರಲಿಲ್ಲವೆಂದರೆ Chief Minister ಇದ್ದಾರೆ ಅವರು ಉತ್ತರ ಕೊಡಬಹುದಾಗಿತ್ತು. ಅಥವಾ ನೀವು ಕೊಡಬಹುದಾಗಿತ್ತು. ನಿಮಗೆ entrust ಮಾಡಬಹುದಾಗಿತ್ತು. ಅಥವಾ ಅಲ್ಲಿ ಬೇರೆಯವರಿಗೆ entrust ಮಾಡಿ ಇಲ್ಲಿ ಇರಬಹುದಾಗಿತ್ತು. ಅವರೇ ಬಂದು ಉತ್ತರ ಕೊಡಬೇಕೆಂದು ಏನಿಲ್ಲ. ಸರ್ಕಾರ ಎಂದರೆ joint